ಇದ್ದೀರಲ್ಲಾ...? ಬೇಗ ಎದ್ದು ವಾಕಿಂಗ್, ವ್ಯಾಯಾಮ ಮಾಡಬಾರದಾ? ಆ ಡೊಳ್ಳು ಹೊಟ್ಟೆಯಾದರೂ ಕರಗುತ್ತಿತ್ತು' ಎನ್ನುವುದೇ?

ಈ ಹೆಣ್ಣು ಮಕ್ಕಳನ್ನು ಸೃಷ್ಟಿಸಿ ಭೂಮಿಗೆ ಕಳಿಸುವಾಗ ಬ್ರಹ್ಮ ಸಂಶಯ ಎಂಬ ಬಾಂಬನ್ನು ಜೊತೆಗೆ ಕಳಿಸಿರಬೇಕು. ಈ ವಿಷಯದಲ್ಲಿ ಭಗವಾನ್ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಉಪದೇಶಿಸಿದ 'ಸಂಶಯಾತ್ಮಾ ವಿನಶ್ಯತಿ' ಅರ್ಥಾತ್ 'ಸಂದೇಹ ಮಾಡುವವನು ನಾಶವಾಗುತ್ತಾನೆ' ಎಂಬ ವಾಕ್ಯ ಇಲ್ಲಿ ಗೌಣ!

ನನ್ನ ವಿಷಯವನ್ನೇ ತೆಗೆದುಕೊಳ್ಳಿ. ಮೊನ್ನೆ ಇವಳ ಗೆಳತಿಯ ತಂಗಿಯ ಮದುವೆಗೆ ಇಬ್ಬರೂ ಹೋಗಿದ್ದೆವು. ಮದುವೆ ಭರ್ಜರಿ! ಥರಾವರಿ ಸೀರೆಯುಟ್ಟ ನಾರೀಮಣಿಗಳು, ಚೂಡಿ, ಲಂಗ ಧರಿಸಿದ ತರಳೆಯರು ಅತ್ತಿಂದಿತ್ತ ಇತ್ತಿಂದತ್ತ ಓಡಾಡುವಾಗ ಈ ಉಪ್ಪುಂಡ ಜೀವ ಸುಮ್ಮನಿರಲಾದೀತೇ? ನೋಡಿ ಕಣ್ಣು ತಂಪಾದ ನಂತರ ಒಂದಿಬ್ಬರನ್ನು ಸಹಜವಾಗಿ ಮಾತಾಡಿಸಿದೆ. ಸಂಶಯದಲ್ಲೇ ನನ್ನನ್ನು ಅವಲೋಕಿಸುತ್ತಿದ್ದಳು ನನ್ನ ಅರ್ಧಾಂಗಿ. ಊಟಕ್ಕೆ ಸಾಲಲ್ಲಿ ನಿಂತಾಗ ನನ್ನ ಹಿಂದಿದ್ದ ಪತ್ನಿಗೆ ತಟ್ಟೆ ಕೊಡುವುದರೊಂದಿಗೆ ಅವಳ ಹಿಂದಿದ್ದ ಒಬ್ಬ ಸುಂದರ ತರುಣಿಗೂ ತಟ್ಟೆ ಕೊಟ್ಟಾಗ ಪತ್ನಿಯ ಕಣ್ಣುಗಳು ಅಕ್ಷರಶಃ ನಿಗಿನಿಗಿ ಕೆಂಡದುಂಡೆಯಾಗಿದ್ದವು. ಕಣ್ಣಲ್ಲಿ ಮನೆಗೆ ಬನ್ನಿ ನೋಡ್ಕೋತೀನಿ ಅಕ್ಷರಗಳು ಕಂಡವು. ಮನೆಗೆ ಬಂದ ನಂತರ ಅವಳನ್ನು ಸಮಾಧಾನಪಡಿಸಲು ಮರುದಿನ ರೂ.5000ದ ಶಾಪಿಂಗ್ ಫಿಕ್ಸ್ ಆಯಿತು.

ಕಳೆದ ದೀಪಾವಳಿ ಹಬ್ಬಕ್ಕೆ ಅವಳ ತವರಿಗೆ ಹೋದಾಗ ಅವಳ ತಂಗಿಯೊಂದಿಗೆ 'ಈ ಸಮಯ ಶೃಂಗಾರಮಯ' ರೀತಿಯಲ್ಲಿ ಸಂಭಾಷಿಸಿದ್ದಕ್ಕೆ ಆಮೇಲೆ ಅವಳ ತವರಿಗೆ ನನ್ನನ್ನು ಬಾಯ್ಕಾಟ್ ಮಾಡಿ ತಾನೊಬ್ಬಳೇ ಹೋಗಲಾರಂಭಿಸಿದ್ದಾಳೆ. ನನ್ನ ಮನದನ್ನೆ ಅವಳ ಅಮ್ಮನೊಂದಿಗೆ ಫೋನಲ್ಲಿ ಸಂಭಾಷಿಸುವುದು ನಿತ್ಯ ಕಾಯಕ. ಸಂಜೆ 4.30ಕ್ಕೆ ಆರಂಭ. ವಿಷಯ ಏನೂ ಇರುವುದಿಲ್ಲ. ಮತ್ತೆ, ಮತ್ತೆ, ಮತ್ತೆ... ಆಗಾಗ 'ಇನ್ನೇನೂ ವಿಷಯ ಇಲ್ಲ' ಉದ್ಗಾರ! ನಂತರ ಅರ್ಧ ಗಂಟೆ ಮಾತನಾಡಿರುತ್ತಾರೆ! ಬಹುಶಃ ಅಂಬಾನಿ ಮಹಾಶಯ ಮಹಿಳೆಯರ ಈ ಗುಣ ಕಂಡೇ ಫ್ರೀ ಟಾಕಿಂಗ್ ಕೊಟ್ಟಿರಬೇಕು.

'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬಂತೆ ತಾವು ಮಾಡುವ ಅಡುಗೆ ಶ್ರೇಷ್ಠ ಎಂದೇ ಇವರ ನಂಬಿಕೆ.

'ಸಾಂಬಾರ್ ಹೇಗಿದೇರೀ' ಎಂದು ಉಲಿದಾಗ ಅಪ್ಪಿತಪ್ಪಿ ನೀವು ವಾಸ್ತವ ಸಂಗತಿ 'ಸ್ವಲ್ಪ ಉಪ್ಪು ಜಾಸ್ತಿಯಾಗಿದೆ' ಎಂದರೆ ನಿಮ್ಮ ಕಥೆ ಮುಗಿಯಿತು. ಕೊಂಚ ಬಾಯಿಗೆ ಹಾಕಿ ರುಚಿ ನೋಡಿದಂತೆ ಮಾಡಿ 'ನೀವೋ, ನಿಮ್ಮ ನಾಲಿಗೆಯೋ, ರುಚಿ ಬಗ್ಗೆ ಏನೂ ಗೊತ್ತಿಲ್ಲ ನಿಮಗೆ...' ಎಂದು ಬಾಯಿಬಡಿಯುತ್ತಾಳೆ. ನನ್ನ ಅಜ್ಞಾನಕ್ಕೆ ನಾನು ಮರಮರನೆ ಮರುಗುತ್ತೇನೆ.

ಇತ್ತೀಚೆಗೆ ಸಂಜೆ ಗೆಳತಿಯರೊಂದಿಗೆ ಮಾಲ್ ಸುತ್ತುವುದು ಗಮನಕ್ಕೆ ಬಂದಿತ್ತು. ಅದೊಂದು ದಿನ ಅವಳು ವಾಪಸ್ ಬಂದ ನಂತರ ಅಳುಕಿನಿಂದಲೇ ಕೇಳಿದೆ. 'ಮಾಲ್‌ನಲ್ಲಿ ಏನೇನು ಶಾಪಿಂಗ್ ಮಾಡಿದಿರಿ?' ಸಂಭ್ರಮದಿಂದ ಉತ್ತರಿಸಿದಳು.

'ಹೆಚ್ಚೇನೂ ಇಲ್ಲ ಕಣ್ರೀ... ಹತ್ತು ಗ್ರೂಪ್ ಫೋಟೊ, 26 ಸೆಲ್ಫೀ... ಮತ್ತೆ ಒಂದು ಕೇಜಿ ಪುಡಿ ಉಪ್ಪು'. ನನಗೆ ಹೃದಯಾಘಾತವಾಗುವುದೊಂದೇ ಬಾಕಿ! ಒಂದು ಕೇಜಿ ಉಪ್ಪಿನ ಖರೀದಿಗೆ ಮಾಲಿಗೆ ಹೋಗಬೇಕೇ?

ಅಪ್ಪಿತಪ್ಪಿ ನನಗೆ ಶೀತ, ಕೆಮ್ಮು ಆದರೆ ಮುಗಿಯಿತು. ಆರಂಭ ಇವಳ ವರಾತ. 'ಇದಕ್ಕೇ ನಾನು ಎಣ್ಣೆ ತಿಂಡಿ ಮಾಡೋಲ್ಲ. ಆದರೂ ಅನಾರೋಗ್ಯ ಅಂತೀರಿ. ಇನ್ನು ಅದನ್ನೆಲ್ಲ ಮಾಡಿದ್ದರೆ ನಿಮ್ಮ ಆರೋಗ್ಯದ ಗತಿಯೇನು?' ಅವಳಿಗೇನು ಗೊತ್ತು? ಪಕ್ಕದ ಬೀದಿಯ ಭಟ್ಟರ ಹೋಟೆಲಿನಲ್ಲಿ ವಡೆ, ಬೋಂಡ, ಪೂರಿ ಹಾಗೂ ಆದಿತ್ಯ ಬೇಕರಿಯಲ್ಲಿ ಪಫ್, ಟೋಸ್ಟ್ ಎಲ್ಲವನ್ನೂ ಗೆಳೆಯರೊಂದಿಗೆ ಆಗಾಗ ಮೆಲ್ಲುತ್ತಿದ್ದುದು?

ಇನ್ನು ಟೀವಿ ರಿಮೋಟ್ ಕುರಿತು ಯಾವಾಗಲೂ ಅವಳು ವಿರೋಧ ಪಕ್ಷವೇ. ನನಗೆ ನ್ಯೂಸ್ ಬೇಕು. ಅವಳಿಗೆ ಮನೆಹಾಳು ಧಾರಾವಾಹಿಗಳು ಬೇಕು. ಅವಳು ಹೊರಹೋದಾಗ ಮಾತ್ರ ನನಗೆ ಅವಕಾಶ. ಆದರೆ ಏನೇ ಅನ್ನಿ, ಒಮ್ಮೊಮ್ಮೆ ಅನಿಸುತ್ತೆ, ಅವಳು ಹಾಗೆ ಮಾಡುವುದು ನನ್ನ ಒಳಿತಿಗೇ ತಾನೇ? ಹಾಗಾಗಿ ಎಷ್ಟೇ ವಿರೋಧಿಸಿದರೂ ಅವಳು ನನಗೆ 'ಮನಮೆಚ್ಚಿದ ಮಡದಿಯೇ'.

ಒಂದು ಪ್ರಶ್ನೆ. ನಿಮ್ಮ ಹೆಂಡತೀಯೂ ಹೀಗೇನಾ?

ಪ್ರತಿಕ್ರಿಯಿಸಿ: **feedback@sudha.co.in**




ಸಂಕ್ರಾಂತಿ ಮುಗಿದರೂ ನಿಮ್ಮ ನವಂಬರ್ ಕ್ರಾಂತಿ ಸೆಟಲ್ ಆಗಲಿಲ್ಲವಲ್ರೀ.... !



## ಸಮಯ

ಪ್ರಪಂಚದಲ್ಲಿ ಇಂದಿಗೂ
ಹೆಚ್ಚು ಕಡಿಮೆ ಆಗದಿರುವುದು
ಅಮೂಲ್ಯವಾದ ಸಮಯ
ಹಣದ ವ್ಯಯವಾದರೂ
ಮಾಡಲೇಬಾರದು
ಸಮಯದ ಅಪವ್ಯಯ

—ವೆಂಕಟೇಶ ಚಾಗಿ, ಕೊಪ್ಪಳ



ಈಗೀಗ ಭೂಮಿ ಒತ್ತುವರಿ ವಿಶ್ವವ್ಯಾಪಿಯಾಗಿದೆ. ಟ್ರಂಪ್ ಅಂತೂ ವೆನಿಜುವೆಲಾ, ಗ್ರೀನ್ ಲ್ಯಾಂಡ್‌ಗಳನ್ನೇ ಒತ್ತುವರಿ ಮಾಡೋದ್ರಲ್ಲಿದ್ದಾರೆ!